# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಬಿ.ಟಿ.ಎಂ ಲೇಔಟ್ ಉಪ-ವಿಭಾಗದ ವಾರ್ಡ್ ಸಂಖ್ಯೆ-152 ಎಸ್.ಜಿ.ಪಾಳ್ಯ
## ಕಛೇರಿಯಲ್ಲಿ ದಿನಾಂಕ: 04.06.2022 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು

* * * * * *

ದಿನಾಂಕ-04-06-2022 ರಂದು ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ, ಹೊಸದಾಗಿ ನಿಯೋಜನೆಗೊಂಡಿರುವ ಅದ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲ್ಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ, ಮೊದಲಿಗೆ ಸಭೆಗೆ ಹಾಜರಿದ್ದ ಎಲ್ಲಾ ಇಲಾಖೆಯ ಅಧಿಕಾರಿಗಳು/ಸಿಬ್ಬಂದಿವರ್ಗ ಮತ್ತು ವಾರ್ಡ್ ಸದಸ್ಯರನ್ನು ಪರಿಚಯ ಮಾಡುತ್ತಾ, ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಇಲಾಖೆವಾರು ಚರ್ಚಿಸಿ ಬಗೆಹರಿಸಿಕೊಳ್ಳಲು ಅಧ್ಯಕ್ಷರು ಸಲಹೆಯನ್ನು ನೀಡಿರುತ್ತಾರೆ. ಈ ಕುರಿತಂತೆ ಈ ಕೆಳಕಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಹರಿಸುವ ಬಗ್ಗೆ ಕೈಗೊಳ್ಳುವ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.

ಸಭೆಗೆ ಹಾಜರಿದ್ದ ಅಧಿಕಾರಿ ವರ್ಗ/ ಸದಸ್ಯರು

| ಕ್ರಮ .ಸಂ | ಹೆಸರು | ಮೊಬೈಲ್ ಸಂಖ್ಯೆ |
|---|---|---|
| ೦೧ | ಶ್ರೀ.ಅಶೋಕ್.ಎಸ್.ಬಿರಾದಾರ ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಟಿ.ಎಂ ಲೇಔಟ್ ಉಪವಿಭಾಗ | 9008658224 |
| ೦೨ | ಶ್ರೀ.ಸತೀಶ್.ಡಿ ಸಹಾಯಕ ಅಭಿಯಂತರರು ವಾರ್ಡ್152 ಎಸ್.ಜಿ.ಪಾಳ್ಯ | 9480688152 |
| ೦೩ | ಶ್ರೀ.ಅಜಯ್‌ಕುಮಾರ್ ಕಿರಿಯ ಆರೋಗ್ಯ ಪರಿವೀಕ್ಷಕರು | 9632222304 |
| ೦೪ | ಶ್ರೀ. ಮಲ್ಲಿಕಾರ್ಜುನ್ ಬಿರಾದರ ಹಿರಿಯ ಆರೋಗ್ಯ ಪರಿವೀಕ್ಷಕರು | 9945042307 |
| ೦೫ | ಶ್ರೀ.ಸುರೇಶ್ ಎ.ಎಸ್.ಐ ಎಸ್.ಜಿ.ಪೋಲಿಸ್ ಠಾಣೆ | 8123010522 |
| ೦೬ | ಶ್ರೀ.ಹೋಲಿಯಪ್ಪ ಮಾರ್ಶ್‌ಲ್ | 8904349926 |
| ೦೭ | ಶ್ರೀ.ಡಾ॥ ಗೌತಮ್ ಪ್ರಕಾಶ್ ಹೆಚ್ ಮೆಡಿಕಲ್ ಆಫಿಸರ್ | 9986000094 |
| ೦೮ | ಶ್ರೀ.ಕೃಷ್ಣ.ಸಿ ಕೆಲಸ ಪರಿವೀಕ್ಷಕರು ಬಿ.ಡ.ಬ್ಲೂ.ಎಸ್.ಎಸ್.ಬಿ | 9845768405 |
| ೦೯ | ಶ್ರೀ ಸೈಯದ್ ನಸರುದ್ದೀನ್ ಸದಸ್ಯರು | 9741518897 |
| ೧೦ | ಶ್ರೀ.ಮುನಿಂದ್ರ ಮೇಲ್ವಿಚಾರಕರು ಘ.ತ್ಯಾನಿ | 9901002067 |
| ೧೧ | ಶ್ರೀ ರಮೇಶ್ ಸದಸ್ಯರು | 9731108622 |
| ೧೨ | ಶ್ರೀ.ಗಂಗಾದ್ರೀ ಮೇಲ್ವಿಚಾರಕರು ಘ.ತ್ಯಾನಿ | 9980225272 |
| ೧೩ | ಶ್ರೀ.ಎನ್.ಲೋಕೇಶ್ ಸದಸ್ಯರು | 9448579144 |
| ೧೪ | ಶ್ರೀ.ಬಿ.ಟಿ.ಕೃಷ್ಣಮೂರ್ತಿ ಸದಸ್ಯರು | 9886339044 |
| ೧೫ | ಶ್ರೀಮತಿ.ಸ್ವಾಮಿಗೌಡ ಪರಿವೀಕ್ಷಕರು ತೊಟಗಾರಿಕೆ ಇಲಾಖೆ ದಕ್ಷಿಣ | 9945378526 |
| ೧೬ | ಶ್ರೀ ಮಂಜೂನಾಥ ಪಿ. ಮೇಲ್ವಿಚಾರಕರು ಘ.ತ್ಯಾನಿ | 9740903427 |
| ೧೭ | ಶ್ರೀ.ದೇವರಾಜು ಮಡಿವಾಳ ಪೊಲೀಸ್ ಠಾಣೆ | 9972106146 |
| ೧೮ | ಶ್ರೀಮತಿ.ಕವಿತ ಆರ್. | 9620394514 |

1) ಶ್ರೀ.ಲೋಕೆಶ್.ಎನ್ ರವರು ಮಾತನಾಡಿ, ಸೆಂಟ್ ಜಾನ್ಸ್ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಬೀದಿ ದೀಪದ ಕಂಬ ಮುರಿದು ನೆಲಕ್ಕುರುಳಿ ಬಿದ್ದಿರುರುವುದರಿಂದ ಅಲ್ಲಿನ ಪಾದಚಾರಿಗಳಿಗೆ ಸುಗಮ ಸಂಚಾರಕ್ಕೆ ತೊಂದರೆಯಾಗುತ್ತಿರುತ್ತದೆ ಹಾಗೂ ಅನೈತಿಕ ಚಟುವಟಿಕೆಗಳಿಗೆ ಅನುವುಮಾಡಿಕೊಳ್ಳುವಂತಿರುತ್ತದೆ ಆದುದರಿಂದ ಸದರಿ ರಸ್ತೆಗೆ ಹೊಸ ದೀಪವನ್ನು ಅಳವಡಿಸಲು ಕೋರುತ್ತಾ ಹಾಗೂ ಸೆಂಟ್ ಜಾನ್ಸ್ ವಸತಿಗೃಹದ ಕಾಂಪೌಂಡ್ ಗೋಡೆಯ ಮೇಲೆ ಬೆಳೆಸಿರುವ ಬಳ್ಳಿ ಸಸಿಗಳ ರೆಂಬೆ ಕೊಂಬೆಗಳು ರಸ್ತೆಯುದ್ದಕ್ಕೂ ಹಬ್ಬಿರುವುದರಿಂದ ಇವುಗಳನ್ನು ಕಟಾವು ಮಾಡಬೇಕೆಂದು ಸಭೆಗೆ ತಿಳಿಸಿದರು. ಈ ಬಗ್ಗೆ ಮಾನ್ಯ ಅಧ್ಯಕ್ಷರು ಕೂಡಲೇ ಸಂಬಂಧ ಪಟ್ಟ ವಿಭಾಗದಿಂದ ಕ್ರಮವಹಿಸಲು ವಾರ್ಡ್ ಅಭಿಯಂತರರಿಗೆ ಸೂಚಿಸಿದರು.

2) ಶ್ರೀ.ಲೋಕೇಶ್ ರವರು ಮಾತನಾಡಿ, ತಾವರೆಕೆರೆ ಮುಖ್ಯರಸ್ತೆಗಳ ಮ್ಯಾನ್ ಹೋಲ್‌ಗಳು ರಸ್ತೆಮಟ್ಟಕ್ಕಿಂತ ಕುಸಿದಿದ್ದು, ಅಲ್ಲಿನ ರಸ್ತೆ ಸವಾರರಿಗೆ ಸುಮಗ ಸಂಚಾರಕ್ಕೆ ತೊಂದರೆಯಾಗತ್ತಿರುವ ಬಗ್ಗೆ ಸಭೆಗೆ ತಿಳಿಸಿದರು. ಈ ಬಗ್ಗೆ ಮಾನ್ಯ ಸಭಾಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮಂಡಳಿಯವರ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿ ಪ್ರಸ್ತಾಪಿತ ದೂರಿನ ಬಗ್ಗೆ ಕ್ರಮವಹಿಸಲು ಸೂಚಿಸಿದರು.

3) ಸಭೆಗೆ ಹಾಜರಿದ್ದ ಶ್ರೀ ಸೈಯದ್ ನಜೂರುದ್ದಿನ್ ಮಾತನಾಡಿ, 6ನೇ ಅಡ್ಡರಸ್ತೆ ಬಾಲಜಿನಗರ ಪ್ರದೇಶದಲ್ಲಿ ಬೃಹತ್ ಮಳೆ ನೀರುಗಾಲುವೆ ಇದ್ದು, ಅಲ್ಲಿನ ಅಕ್ಕ ಪಕ್ಕದ ನಿವಾಸಿಗಳು ಡೆಬ್ರಿಸ್ ಮತ್ತು ಇತರೆ ಅನುಪಯುಕ್ತ ಕಸವನ್ನು ಗಾಲಿವೆಯಲ್ಲಿ ಬಿಸಾಡುತ್ತಿರುವುದರಿಂದ ಅಲ್ಲಿನ ವಾತವರಣ ಅನೈರ್ಮಲ್ಯವಾಗುತ್ತಿರುತ್ತದೆ. ಆದುದರಿಂದ ಸದರಿ ಮಳೆ ನೀರುಗಾಲುವೆಗೆ ಕಸ ಬಿಸಾಡದಂತೆ ಫೆನ್ಸಿಂಗ್‌ನ್ನು ಅಳವಡಿಸಲು ಅನೇಕಬಾರಿ ತಿಳಿಸಿದ್ದರೂ ಸಹ ಇಲ್ಲಿಯವರೆಗು ಯಾವುದೇ ಕ್ರಮಜರುಗಿಸಿರುವುದಿಲ್ಲ ಎಂದು ತಿಳಿಸಿದರು. ಈ ಬಗ್ಗೆ ಮಾನ್ಯ ಅಧ್ಯಕ್ಷರು ದೂರವಾಣಿ ಮುಖೇನ ನೀರುಗಾಲುವೆ ಇಲಾಖೆಯ ಅಧಿಕಾರಿಗಳೊಂದಿಗೆ ಮಾತನಾಡಿ ಚರ್ಚಿಸಿದಾಗ, ಬೃಹತ್ ಮಳೆ ನೀರುಗಾಲುವೆ ಇಲಾಖೆಯ ಮುಂಬರುವ ಅನುದಾನದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲು ಮಿಸಲಿಟ್ಟಿದ್ದು, ತುರ್ತಾಗಿ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

4) ಸಭೆಗೆ ಹಾಜರಿದ್ದ ಶ್ರೀ ಬಿ.ಟಿ ಕೃಷ್ಣಮೂರ್ತಿರವರು ಮಾತನಾಡಿ, ತಾವರೆಕೆರೆ ಪಾರ್ಕ್ ರಸ್ತೆಯಲ್ಲಿ ಸುಮಾರು ದಿನಗಳಿಂದ ಕಟ್ಟುನಿಂತಿರುವ/ಅನಾಮಿಕ ಮಾಲೀಕರಿಲ್ಲದ ವಾಹನಗಳು ನಿತಿಂರುವುದು ಕಂಡುಬಂದಿದ್ದು, ಕೂಡಲೇ ಅದನ್ನು ತೆರವುಗೊಳಿಸಲು ಸಭೆಗೆ ತಿಳಿಸಿದರು. ಈ ಬಗ್ಗೆ ಸಭೆಗೆ ಹಾರಿದ್ದು, ಸಂಚಾರಿ ಪೊಲೀಸ್ ಇಲಾಖೆಯವರನ್ನು ಉದ್ದೇಶಿಸಿ ಮಾನ್ಯ ಅಧ್ಯಕ್ಷರು ಮಾತನಾಡಿ ಅಂತಹ ವಾಹನಗಳನ್ನು ಗುರುತಿಸಿ ಕೂಡಲೇ ಕ್ರಮವಹಿಸಲು ಸೂಚಿಸಿದರು.

5) ಸಭೆಗೆ ಹಾಜರಿದ್ದ ಶ್ರೀ ಮುನಿವೆಂಕಟಪ್ಪ ಆರಕ್ಷಕ ಉಪನಿರೀಕ್ಷರು ಸಂಚಾರಿ ಪೊಲೀಸ್ ಠಾಣೆ ಮೈಕೋ ಲೇಔಟ್ ರವರು ಮಾತನಾಡಿ, ಎಸ್.ಜಿ.ಪಾಳ್ಯ ವ್ಯಾಪ್ತಿಪ್ರದೇಶಗಳಲ್ಲಿ ಸಾರ್ವಜನಿಕರು ಹೆಲ್‌ಮೆಟ್ ಧರಿಸದೇ ದ್ವೀಚಕ್ರವಾಹನಗಳನ್ನು ಚಲಾಯಿಸುತ್ತಿರುವುದು ಹೆಚ್ಚಾಗಿ ಕಂಡುಬರುತ್ತಿರುತ್ತದೆ. ಈ ಬಗ್ಗೆ ಹಲವಾರು ಬಾರಿ ತಿಳಿಸಿದ್ದರೂ ಸಹ ನಾವೆಲ್ಲ ಸ್ಥಳೀಯರು ವಾದಿಸುತ್ತಿರುವುದು ಕಂಡುಬಂದಿರುತ್ತದೆ ಹಾಗೂ ಹೆಲ್‌ಮೆಟ್‌ರಹಿತ ದ್ವಿಚಕ್ರ ವಾಹನ ಚಲಿಸುವಾಗ ರಸ್ತೆ ಅಪಘಾತಗಳಾದಲ್ಲಿ ಪ್ರಾಣಹಾನಿಯಾವು ಸಂಭವವಿದ್ದು, ಅವಲಂಬಿತ ಕುಟುಂಬ ಸದಸ್ಯರಿಗೂ ತುಂಬ ತೊಂದರೆಯಾಗುತ್ತದೆ. ಆದುದರಿಂದ ಸಭೆಗೆ ಹಾಜರಿದ್ದ ಎಲ್ಲಾ ವಾರ್ಡ್ ಸದಸ್ಯರಿಗೆ ತಿಳಿಸುತ್ತಾ, ವಾರ್ಡ್ ಪ್ರದೇಶದ ಸ್ಥಳಿಯರಿಗೆ ಅದರಲ್ಲೂ ಯುವ ಜನತೆಗೆ ಹೆಲ್‌ಮೆಟ್ ದರಿಸಿ ಸುರಕ್ಷಿತ ವಾಹನ ಚಲಾಯಿಸಲು ಜಾಗೃತಿ ಮೂಡಿಸಿಸಬೇಕೆಂದು ಸಭೆಗೆ ತಿಳಿಸಿದರು.

6) ಮಾನ್ಯ ಸಭಾಧ್ಯಕ್ಷರು ವಾರ್ಡ್ ಅಭಿಯಂತರರನ್ನು ಉದ್ದೇಶಿಸಿ ಮತನಾಡಿ, ಕಳೆದ ಸಭೆಯಲ್ಲಿ ಚರ್ಚಿಸಲಾಗಿದ್ದ ವಾರ್ಡ್ ವ್ಯಾಪ್ತಿಯಲ್ಲಿ ಎಷ್ಟು ರಸ್ತೆಗಳಿವೆ, ಎಷ್ಟು ರಸ್ತೆಗಳಲ್ಲಿ ರಸ್ತೆಗುಂಡಿಗಳಿವೆ, ಇವುಗಳಲ್ಲಿ ಎಷ್ಟು ರಸ್ತೆಗುಂಡಿಗಳನ್ನು ಮುಚ್ಚಲಾಗಿದೆ, ಇನ್ನೂಳಿದ ರಸ್ತೆಗುಂಡಿಗಳನ್ನು ಮುಚ್ಚಲು ಯಾವ ಯಾವ ಕ್ರಮಗಳನ್ನು ಜರುಗಿಸಲಾಗಿದೆ ಎಂದು ಕೇಳಿದಾಗ, ಇದಕ್ಕೆ ವಾರ್ಡ್ ವ್ಯಾಪ್ತಿಯಲ್ಲಿನ ರಸ್ತೆಗುಂಡಿಗಳನ್ನು ವಾರ್ಡ್ ಅನುದಾನದಲ್ಲಿ ಲಭ್ಯವಿದ್ದ ಕಾಮಗಾರಿಯಿಂದ ರಸ್ತಗುಂಡಿಗಳನ್ನು ಮುಚ್ಚಲಾಗುತ್ತಿರುವುದು ಎಂದು ವಾರ್ಡ್ ಅಭಿಯಂತರರು ಸಭೆಗೆ ತಿಳಿಸಿದರು.

7.) ಶ್ರೀ ಲೋಕೇಶ್‌ವರು ಮಾತನಾಡಿ, ಚಿಕ್ಕಾಡುಗೋಡಿ ಮತ್ತು ಮಾರುತಿನಗರ ಸುತ್ತಮುತ್ತಲಿನ ರಸ್ತೆಗಳಲ್ಲಿನ ಪಿ.ಜಿಗಳಲ್ಲಿ ನೆಲಸಿರುವ ಯುವಕ/ಯುವತಿಯರು ಎಲ್ಲಂದರೆಲ್ಲೆ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುತ್ತಿರುವುದು ಮತ್ತು ತಡರಾತ್ರಿ ಮಧ್ಯಪಾನ ಮಾಡಿ ಓಡಾಡುತ್ತಿರುವುದು ಕಂಡುಂದಿರುತ್ತದೆ. ಇದರಿಂದ ಸಾರ್ವಜನಿಕರು ಅಂತಹ ಪ್ರದೇಶದಲ್ಲಿ ಒಡಾಡಲು ಅಸಹ್ಯವಾಗುತ್ತಿರುತ್ತದೆ ಈ ಬಗ್ಗೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲು ಸಭೆಗೆ ತಿಳಿಸಿದರು. ಈ ಬಗ್ಗೆ ಮಾನ್ಯ ಸಭಾಧ್ಯಕ್ಷರು ಹಿರಿಯ ಆರೋಗ್ಯ ಪರಿವೀಕ್ಷಕರನ್ನು ಉದ್ದೇಶಿಸಿ, ವಾರ್ಡ್ ವ್ಯಾಪ್ತಿಯಲ್ಲಿ ಅಂತಹ ಪಿ.ಜಿಗಳನ್ನು ಗುರುತಿಸಿ, ಪರವಾನಿಗೆಯನ್ನು ರದ್ದುಗೊಳಿಸಲು ಕ್ರಮವಹಿಸಬೇಕೆಂದು ಸೂಚಿಸಿದರು ಹಾಗೂ ರಾತ್ರಿ ಪಾಳಿಯಲ್ಲಿ ಪೊಲೀಸ್‌ರು ಗಸ್ತುಮಾಡಲು ತಿಳಿಸಿದರು. ಒಂದು ವೇಳೆ ಅಂತಹ ಅನೈತಿಕ ಚಟುವಟಿಕೆಗಳು ಕಂಡುಬಂದಲ್ಲಿ ದೂರವಾಣಿ 100 ಕ್ಕೆ ಸಂಪರ್ಕಿಸಲು ಸದಸ್ಯರಲ್ಲಿ ತಿಳಿಸಿದರು.

8) ಸಭೆಗೆ ಹಾಜರಿದ್ದ ಶ್ರೀ ಹರೀಶ್ ಸಹಾಯಕ ಅಭಿಯಂತರರು, ಬೆಂಗಳೂರು ನೀರು ಸರಬರಾಜು ಮಂಡಳಿರವರು ಮಾತನಾಡಿ 2ನೇ ಮುಖ್ಯರಸ್ತೆ, ಭಾರತಿ ಬಡಾವಣೆಯಲ್ಲಿನ ಸ್ಥಳೀಯ ನಿವಾಸಿಗಳ ಮನೆಗೆ ಒಳಚರಂಡಿ ನೀರು ನಗ್ಗುತಿರುತ್ತದೆ. ಪರಿಶೀಲಿಸಿದಾಗ ಒಳಚರಂಡಿ ಸಂಪರ್ಕದ ಪೈಪ್ ಲೈನ್ ಸಂಪೂರ್ಣವಾಗಿ ಹಾಳಾಗಿರುವುದರಿಂದ ಇದನ್ನು ದುರಸ್ಥಿಪಡಿಸಲು ಸುಮಾರು 4 ಮೀಟರ್ ಉದ್ದ ರಸ್ತೆ ಅಗೆತಕ್ಕೆ ಅನುಮತಿಯನ್ನು ಕೋರಿರುತ್ತಾರೆ. ಅದಲ್ಲದೇ ಎಸ್.ಜಿ.ಪಾಳ್ಯ ಮುಖ್ಯರಸ್ತೆ, ಆಂಜನೇಯ ದೇವಸ್ಥಾನದ ಮುಂಭಾಗದಲ್ಲಿ ಅಳವಡಿಸಿರುವ ಓ.ಎಫ್.ಸಿ ಚೆಂಬರ್‌ಗಳಿಂದ ಕಾವೆರಿ ನೀರು ಹೊರಗೆ ಹರಿದು ರಸ್ತೆಯಲ್ಲೆಲ್ಲಾ ನಿಲ್ಲಿತ್ತರುತ್ತದೆ. ಈ ಸಮಸ್ಯೆಯನ್ನು ಬಗೆಹರಿಸಲು ಇನ್ಸಪೆಕ್ಷನ್ ಪಿಟ್ ತೆಗೆದು ಪರೀಶಿಲಿಸಲು ರಸ್ತೆ ಅಗೆತಕ್ಕೆ ಅನುಮತಿ ನೀಡಬೇಕಾಗಿ ಕೋರಿದರು. ಈ ಬಗ್ಗೆ ಮಾನ್ಯ ಸಭಾಧ್ಯಕ್ಷರು ವಾರ್ಡ್ ಅಭಿಯಂತರರೊಂದಿಗೆ ಚರ್ಚಿಸಿದಾಗ, ಪ್ರಸ್ತಾಪಿತ ರಸ್ತೆಗಳನ್ನು ಅಗೆದು ಒಳಚರಂಡಿ ಕಾಮಗಾರಿ ಮತ್ತು ಇನ್ಸಪೆಕ್ಷನ್ ಪಿಟ್ ಕಾಮಗಾರಿ ಕೈಗೊಂಡ ನಂತರ ತಮ್ಮಿಂದಲೇ ನಿಯಾಮಾನುಸಾರ ರಸ್ತೆಯನ್ನು ಡಾಂಬರೀಕರಣ ಮಾಡಿ ಯಥಾಸ್ಥಿತಿಗೆ ಕಾಪಾಡಿಕೊಳ್ಳವು ಭರವಸೆಯನ್ನು ನಿಡಿದರೇ ಮಾತ್ರ ರಸ್ತೆ ಅಗೆತದ ಅನುಮತಿಯನ್ನು ನೀಡಬಹುದಾಗಿರುತ್ತದೆ ಎಂದು ವಾರ್ಡ್ ಅಭಿಯಂತರರು ಸಭೆಗೆ ತಿಳಿಸಿದರು.

9) ಸಭೆಗೆ ಹಾಜರಿದ್ದ ಸಂಚಾರಿ ಪೊಲೀಸ್ ಇಲಾಖೆಯ ಅಧಿಕಾರಿಗಳು ಮಾತನಾಡಿ, ಕ್ರೈಸ್ಟ್ ಕಾಲೇಜು ಹಿಂಭಾಗದ ರಸ್ತೆ ಮತ್ತು ಸೂರ್ಯೋದಯ, ಅರುಣೋದಯ ಚೌಟ್ರೀಯ ರಸ್ತೆಯಲ್ಲಿ ಮಳೆ ಬಂದಾಗ ಮಳೆ ನೀರು ಚರಂಡಿಗೆ ಹರಿಯದೇ ರಸ್ತೆಯಲ್ಲೇ ನಿಲ್ಲುತ್ತಿರುತ್ತದೆ ಇದರಿಂದ ರಸ್ತೆ ಸಂಚಾರರಿಗೆ ಸಂಚಾರಕ್ಕೆ ಅಡ್ಡಿಯುಂಟಾಗುತ್ತಿರುತ್ತದೆ ಆದುದರಿಂದ ಮಳೆ ನೀರು ಸರಾಗವಾಗಿ ಚರಂಡಿಗೆ ಹರಿಯುವಂತೆ ಕ್ರಮಕೈಗೊಳ್ಳಬೇಕೆಂದು ಎಂದು ಸಭೆಗೆ ತಿಳಿಸಿದರು, ಈ ಬಗ್ಗೆ ಅಧ್ಯಕ್ಷರು ಮಾತನಾಡಿ ಪ್ರಸ್ತಾಪಿತ ರಸ್ತೆಗಳನ್ನು ಪರಿಶೀಲಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ವಾರ್ಡ್ ಅಭಿಂತರರಿಗೆ ಸೂಚಿಸಿದರು.

10) ಮಾನ್ಯ ಅಧ್ಯಕ್ಷರು ಮಾತನಾಡಿ, ವಾರ್ಡ್ ವ್ಯಾಪ್ತಿಯ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಪ್ರಸ್ತಾಪಿಸಲಾಗಿ, ಶ್ರೀ ಅಜಯ್ ಹಿರಿಯ ಆರೋಗ್ಯ ಪರಿವೀಕ್ಷರು ಮಾತನಾಡಿ ವಾರ್ಡ್ ಪ್ರದೇಶದಲ್ಲಿ ಒಣತ್ಯಾಜ್ಯ ಮತ್ತು ಹಸಿ ತ್ಯಾಜ್ಯ ಸಮರ್ಪಕವಾಗಿ ಸಂಗ್ರಹಿಸಿ ವಿಲೇವಾರಿ ಮಾಡಲಾಗುತ್ತಿರುತ್ತದೆ ಮತ್ತು ಬ್ಲಾಕ್ ಸ್ಪಾಟ್‌ಗಳ ಸಂಖ್ಯೆಗಳು ಆದಷ್ಟು ಕಡಿತಗೊಳಿಸಲು ಕ್ರಮವಹಿಸಲಾಗುತಿರುತ್ತದೆ ಎಂದು ಸಭೆಗೆ ತಿಳಿಸಿದರು.

ಕೊನೆಯದಾಗಿ ಸಭೆ ಅಧ್ಯಕ್ಷರು ಮಾತನಾಡಿ, ಹಾಲಿ ಮುಂಗಾರು ಮಳೆಗಾಲ ಪ್ರಾರಂಭವಾಗುವುದರಿಂದ ವಾರ್ಡ್ ಮಟ್ಟದ ರಸ್ತೆಗಳು ನಿರ್ವಹಣೆ ರಸ್ತೆಗುಂಡಿ ಮುಚ್ಚುವುದು ಮತ್ತು ಮಳೆ ನೀರು ಸರಾಗವಾಗಿ ಹರಿಯುವಂತೆ ಚರಂಡಿಗಳನ್ನು ಸ್ವಚ್ಛಗೊಳಿಸುವುದು ಮತ್ತು ಮಳೆಗಾಲದಲ್ಲಿ ಅಂಟುರೋಗಗಳನ್ನು ಹರಡದಂತೆ ತಮ್ಮ ತಮ್ಮ ಪ್ರದೇಶವನ್ನು ಸ್ವಚ್ಛವಾಗಿ ಇಟ್ಟುಕೊಳ್ಳವುದು ಎಂದು ತಿಳಿಸುತ್ತಾ, ವಾರ್ಡ್ ವ್ಯಾಪ್ತಿಯಲ್ಲಿ ರಾತ್ರಿ ಸಮಯದಲ್ಲಿ ತುರ್ತು ಪರಿಸ್ಥಿತಿಯನ್ನು ನಿರ್ವಹಣೆಮಾಡಲು ಉಪವಿಭಾಗದ ವ್ಯಾಪ್ತಿಯಲ್ಲಿ ತಾತ್ಕಾಲಿಕ ನಿಯಂತ್ರಣ ಕೇಂದ್ರವನ್ನು ಸ್ಥಾಪಿಸಲಾಗಿದ್ದು, ಅದರ ಉಪಯೋಗವನ್ನು ಪಡೆಯಲು ವಾರ್ಡ್ ಅಭಿಯಂತರರಿಗೆ ಸೂಚಿಸುತ್ತಾ, ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ. ಸತೀಶ್.ಡಿ)
ಕಾರ್ಯದರ್ಶಿಗಳು
ವಾರ್ಡ್–152 ಎಸ್.ಜಿ.ಪಾಳ್ಯ

(ಶ್ರೀ. ಅಶೋಕ್.ಎಸ್.ಬಿರಾದಾರ)
ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್–152 ಎಸ್.ಜಿ.ಪಾಳ್ಯ

ಪ್ರತಿಯನ್ನು:

1. ಮಾನ್ಯ ಮುಖ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ.ಲೇಔಟ್ ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೋರಮಂಗಲ ಉಪ-ವಿಭಾಗ ರವರಿಗೆ ಮುಂದಿನ ಕ್ರಮಕ್ಕೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮುಂದಿನ ಕ್ರಮಕ್ಕೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲಮಂಡಳಿ, ಬಿ.ಟಿ.ಎಂ ರವರಿಗೆ ಮುಂದಿನ ಕ್ರಮಕ್ಕೆ
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ(ದ) ರವರಿಗೆ ಮುಂದಿನ ಕ್ರಮಕ್ಕೆ.